ಇಂದು ದಿ:**02-09-2026 ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದ ಸಾಕ್ಷಿಯನ್ನು ಪುನಃ ಕರೆಯಿ**ಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಬಿ ಯು ವಕೀಲರಿಂದ 2 ರಿಂದ 4 ಪ್ರತಿವಾದಿಯ ಪರಃ**

ರಾಮಪ್ಪ, ರೇವಣಸಿದ್ದಪ್ಪ ಮತ್ತು ಮಂಜಪ್ಪ ವಿಭಾಗ ಮಾಡಿಕೊಂಡ ನಂತರ, ರಾಮಪ್ಪ, 2 ರಿಂದ 5 ಮತ್ತು 16 ನೇ ಪ್ರತಿವಾದಿಯರು ದಿನಾಂಕಃ06-04-2016 ರಂದು ವಿಭಾಗ ನೊಂದಾಯಿತ ಪತ್ರದ ಮುಖಾಂತರ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿ ನನ್ನ ತಾಯಿ ಪಕ್ಷಗಾರ ಇರಲಿಲ್ಲ ಎಂದು ಹೇಳುತ್ತಾರೆ. 5 ನೇ ಪ್ರತಿವಾದಿ ತನಗೆ ಬಂದ ಹಿಸ್ಸೆಯನ್ನು ತನ್ನ ತಾಯಿ ಮಂಜಮ್ಮಳಿಗೆ ದಾನಪತ್ರ ಮಾಡಿಕೊಟ್ಟಿದ್ದಾಳೆ ಎಂದರೆ ಸಾಕ್ಷಿ ನನ್ನ ತಾಯಿಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಈ ದಾನಪತ್ರದ ಬಗ್ಗೆ ನನ್ನ ತಾಯಿಗೆ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. ಮಂಜಮ್ಮ ಇವಳು ಈ ದಾವೆಯಲ್ಲಿ ಪಕ್ಷಗಾರ ಇಲ್ಲ ಎಂದರೆ ಸಾಕ್ಷಿ ದಾನಪತ್ರ ಮಾಡಿದ ಬಗ್ಗೆ ಮಾಹಿತಿ ಇಲ್ಲದೇ ಇರುವ ಕಾರಣ, ಆಕೆಯನು ಪಾರ್ಟಿ ಮಾಡಿಲ್ಲ ಎಂದು ಹೇಳುತ್ತಾರೆ. ದಾನಪತ್ರದ ಪ್ರಕಾರ ಆಕೆಯ ಹೆಸರಿಗೆ ಖಾತೆ ಸಹ ಆಗಿದೆ ಎಂದರೆ ಮಾಹಿತಿ ಇಲ್ಲ. 5 ನೇ ಪ್ರತಿವಾದಿ ತನ್ನ ಹಿಸ್ಸೆಯನ್ನು ತನ್ನ ತಾಯಿಗೆ ದಾನಪತ್ರ ಮಾಡಿದ ವಿಷಯ ಗೊತ್ತಿದ್ದರೂ, ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1, 2 ಮತ್ತು 7 ನೇ ಪ್ರತಿವಾದಿಯರು ವಿಭಾಗ ಮಾಡಿಕೊಂಡ ವಿಷಯ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ವಿಭಾಗದ ವಿಷಯ ಗೊತ್ತಿತ್ತು ಎಂದರೆ ಸರಿಯಲ್ಲ, ಸಾಕ್ಷಿ ನನ್ನ ತಾಯಿಗೆ 2019 ರಲ್ಲಿ ಗೊತ್ತಾಯಿತು ಎಂದು ಹೇಳುತ್ತಾರೆ. ನನ್ನ ತಾಯಿಗೆ ಮೊದಲಿನಿಂದಲೂ ವಿಭಾಗದ ವಿಷಯ ಗೊತ್ತಿತ್ತು ಎಂದರೆ ಸರಿಯಲ್ಲ. ನನ್ನ ತಾಯಿ ಒಂದು ವೇಳೆ ನ್ಯಾಯಾಲಯಕ್ಕೆ ಬಂದರೆ ನಿಜ ಸಂಗತಿಗಳು ಗೊತ್ತಾಗುತ್ತದೆ ಎಂದು ನಾನು ಜಿ.ಪಿ.ಎ ಪಡೆದು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಎಲ್ಲಾ ದಾಖಲೆಗಳ ಬಗ್ಗೆ

ಗೊತ್ತಿದ್ದರೂ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**1, 7, 8 ರಿಂದ 15 ನೇ ಪ್ರತಿವಾದಿಯರು ಪಾಟೀ ಸವಾಲಿಗೆ ಸಮಯಕೇಳಿದ್ದು, ಸಕಾರಣ ಇಲ್ಲದೇ ಸಮಯಕೇಳಿದ ಕಾರಣ, ಅವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**6 ನೇ ಪ್ರತಿವಾದಿಯ ಪರ ವಕೀಲರು ಗೈರು ಹಾಜರು ಇದ್ದು, ಅವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ, ಸಂಚಾರಿ ನ್ಯಾಯಾಲಯ,
ಹೊನ್ನಾಳಿ.